749 ಶ್ರೀ ಮಾರಿಹಾಲ್ ಸುರೇಶ್ ಶಿವರುದ್ರಪ್ಪ : ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಿತ್ತೂರು ಪಟ್ಟಣದಲ್ಲಿರುವ ವೀರರಾಣಿ ಚೆನ್ನಾಮ್ಮಾಜಿಯ ಕೋಟೆಯ ಅಭಿವೃದ್ಧಿಗೆ ಪ್ರವಾಸೋದ್ಯಮ ಇಲಾಖೆ ವತಿಯಿಂದ ಕಳೆದ ಮೂರು ವರ್ಷದಲ್ಲಿ ಮಂಜೂರು ಮಾಡಿರುವ ಅನುದಾನವೆಷ್ಟು;

ಆ) ಈ ಅನುದಾನದಲ್ಲಿ ಕೈಗೊಂಡ ಕಾಮಗಾರಿಗಳ ವಿವರ ನೀಡುವುದು;

ಇ) ಬಳಕೆಯಾದ ಅನುದಾನವೆಷ್ಟು?

ಜೆ.ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಸಚಿವರು) :

ಅ) ಕಿತ್ತೂರು ಕೋಟೆಯ ಅಭಿವೃದ್ಧಿಗಾಗಿ ಪ್ರವಾಸೋದ್ಯಮ ಇಲಾಖೆ ವತಿಯಿಂದ ರೂ. 50.00 ಲಕ್ಷಗಳನ್ನು ನಿರ್ದೇಶಕರು, ರಾಜ್ಯ ಪುರಾತತ್ವ ಇಲಾಖೆಗೆ ಬಿಡುಗಡೆ ಮಾಡಲಾಗಿದೆ.

An amount of Rs.50.00 lakhs has been released to the Director, State Archaeology Department for the development of Kittut Fort.

ಆ) ಕಿತ್ತೂರು ಕೋಟೆಯ ಪುನರ್ ನಿರ್ಮಾಣ ಕಾರ್ಯವನ್ನು ನಿರ್ವಹಿಸಿರುವ ರಾಜ್ಯ ಪುರಾತತ್ವ ಇಲಾಖೆಯು ಈ ಅನುದಾನದಲ್ಲಿ ಕೋಟೆಯನ್ನು ಪುನರ್ ನಿರ್ಮಿಸಲು ಕ್ರಮ ಜರುಗಿಸಿರುತ್ತದೆ.

The Executive Agency has proposed to use this amount for reconstruction of Kittur Fort.

ಇ) ಕಾಮಗಾರಿ ಪ್ರಾರಂಭಿಸಬೇಕಾಗಿದೆ.

Work yet to be Started.

640 ಶ್ರೀ ನರೇಂದ್ರಬಾಬು ನೆ.ಲ. : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಯಾವಾಗ ವಿಶ್ವೇಶ್ವರಯ್ಯ ಬಡಾವಣೆಯನ್ನು ನಿರ್ಮಿಸಲಾಯಿತು;

ಆ) ಎಷ್ಟು ಹಂತಗಳಲ್ಲಿ ಹಾಗೂ ಎಷ್ಟು ಸದಸ್ಯರುಗಳಿಗೆ ನಿವೇಶನ ಹಂಚಿಕೆ ಮಾಡಲಾಗಿದೆ;

ಇ) ಈ ಬಡಾವಣೆ ನಿರ್ಮಿಸಿ ಎಷ್ಟು ವರ್ಷಗಳು ಉರುಳಿವೆ;